ಓ ಎಸ್ ನಂಬರ 183/2019
ಪಿ. ಡಬ್ಲ್ಯೂ -1

**ದಿನಾಂಕಃ 01.04.2025.**
**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**
**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ದಾವೆ ಹೂಡಲು ಮಾಹಿತಿಯನ್ನು ನಾನೇ ನೀಡಿರುತ್ತೇನೆ. ನಮ್ಮ ಸ್ವತ್ತಿನಲ್ಲಿ ಅನೈತಿಕ ಚಟುವಟಿಕೆ ನಡೆದಿದ್ದ ಕಾರಣ ಈ ದಾವೆಯನ್ನು ಹೂಡಿರುತ್ತೇನೆ. ಅನೈತಿಕ ಚಟುವಟಿಕೆ ಎಂದರೆ ಏನು ಎಂದರೆ ಸಾಕ್ಷಿ ನಮ್ಮ ಪಿತ್ರಾರ್ಜಿತ ಸ್ವತ್ತಿನಲ್ಲಿ ಬೇರೆಯವರು ಜಬರದಸ್ತ ಮಾಡುತ್ತಿದ್ದರು ಎನ್ನುತ್ತಾರೆ. ಸದರಿ ರೀತಿ ಜಬರದಸ್ತ ಮಾಡುತ್ತಿದ್ದಾರೆ ಎಂದು ಪೊಲೀಸ ಠಾಣೆಗೆ ದೂರು ನೀಡಿರುವುದಿಲ್ಲ, ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎನ್ನುತ್ತಾರೆ. ದಾವಾ ಸ್ವತ್ತು ಒಟ್ಟು ಕ್ಷೇತ್ರ 03 ಎಕರೆ 16 ಗುಂಟೆ ಅದರಲ್ಲಿ ಪೋರ್ಟಖರಾಬ 2 ಗುಂಟೆ ಇರುತ್ತದೆ. ದಾವಾ ಸ್ವತ್ತಿನ ಚೆಕಬಂಧಿ ಪೂರ್ವಕ್ಕೆ ಬಾಳಪ್ಪ ಮರಿಕಟ್ಟಿ, ಪಶ್ಚಿಮಕ್ಕೆ ಅರಣ್ಯ ಇಲಾಖೆಯ ಸಿಮೆ, ದಕ್ಷಿಣಕ್ಕೆ ಪ್ರತಿವಾದಿ ನಂಬರ 6 ಮತ್ತು 7 ರವರ ಜಮಿನು, ಉತ್ತರಕ್ಕೆ ನಮ್ಮ ಜಮೀನುಗಳು. ನನ್ನ ಮತ್ತು ಪ್ರತಿವಾದಿ ನಂಬರ 6 ಮತ್ತು 7 ರವರ ಜಮೀನಿನ ನಡುವೆ ಒಡ್ಡು ಇದೆ. ಪ್ರತಿವಾದಿ ನಂಬರ 6 ಮತ್ತು 7 ರವರ ಸರ್ವೇ ನಂಬರ ನನಗೆ ಗೊತ್ತಿರುವುದಿಲ್ಲ. ನಿಮ್ಮ ಮತ್ತು ಪ್ರತಿವಾದಿ ನಂಬರ 6 ಮತ್ತು 7 ರವರ ಜಮೀನಿನ ನಡುವೆ ಒಡ್ಡು ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಒಡ್ಡಿಗೆ ಪ್ರತಿವಾದಿಗಳು ನಷ್ಟ ಮಾಡಿರುತ್ತಾರೆ. 1ನೇ ಫೇಬ್ರುವರಿ 2019 ರಂದು ಒಡ್ಡನ್ನು ಒಡೆಯಲು ಪ್ರಯತ್ನಿಸಿರುತ್ತಾರೆ. ಒಡ್ಡಿನ ಉದ್ದ ಅಗಲ ನನಗೆ ಹೇಳಲಾಗುವುದಿಲ್ಲ. ಪ್ರತಿವಾದಿಗಳು ಎಷ್ಟು ವಿಸ್ತಿರ್ಣದ ಒಡ್ಡಿಗೆ ಹಾನಿ ಮಾಡಿರುತ್ತಾರೆ ಎಂದು ಹೇಳಲಾಗುವುದಿಲ್ಲ. ನನ್ನ ಮತ್ತು ಪ್ರತಿವಾದಿ ನಂಬರ 6 ಮತ್ತು 7 ರವರ ಜಮಿನೀನ ನಡುವೆ ಒಡ್ಡು ಇದ್ದು, ಹಾಗೂ ಸದರಿ ಒಡ್ಡನ್ನು ಹಾನಿ ಮಾಡಲು ಪ್ರಯತ್ನಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಅದನ್ನು ಸುಳ್ಳು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತು ಪಿತ್ರಾರ್ಜಿತ ಸ್ವತ್ತು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ದಾವಾ ಸ್ವತ್ತನ್ನು 06.05.1947 ರಲ್ಲಿ ನಮ್ಮ ಅಜ್ಜ ಬಸವಂತಪ್ಪ ವೀರಪ್ಪ ದಳವಾಯಿ ಖರೀದಿ ಮಾಡಿರುತ್ತಾರೆ. ದಾವಾ ಸ್ವತ್ತನ್ನು ನಿಂಗಪ್ಪನ ಮಗನಾದ ಈರಪ್ಪ , ಅಪ್ಪಯ್ಯ @ ಅಪ್ಪಣ್ಣ ರವರಿಂದ ಖರೀದಿ ಮಾಡಿರುತ್ತಾರೆ. ಪಿತ್ರಾರ್ಜಿತ ಸ್ವತ್ತು ಎಂಬುದಕ್ಕೆ ಸಂಬಂಧಿಸಿದಂತೆ ಯಾವ ದಾಖಲೆ ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಾನು ಖರೀದಿ ಪತ್ರವನ್ನು ನೋಡಿರುತ್ತೇನೆ. ತಂಟೆ ಬಂದಾಗ ನೋಡಿರುತ್ತೇನೆ. ಖರೀದಿ ತೆಗೆದುಕೊಂಡಾಗ ಖರೀದಿ ಕೊಟ್ಟವರ ಹೆಸರು ವಜಾ ಆಗಿರುತ್ತದೆಯಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸದರಿ ಈರಯ್ಯ ಮತ್ತು ಅಪ್ಪಯ್ಯನ ಹೆಸರು 1970 ರ ವೆರಗೂ ಮುಂದುವರೆದುಕೊಂಡು ಬಂತು ಎಂದರೆ ಸರಿ. ಆರ್ ಟಿ ಸಿ ಯಲ್ಲಿ

ಈರಯ್ಯ ಮತ್ತು ಅಪ್ಪಣ್ಣ ರವರ ಹೆಸರು ಮಾಲೀಕರು ಎಂದು ಮುಂದುವರೆದುಕೊಂಡು ಬಂದಿರುತ್ತದೆ ಎಂದರೆ ಸಾಕ್ಷಿ ನಮ್ಮ ಕಬ್ಜಾದಲ್ಲಿರುತ್ತದೆ ಎನ್ನುತ್ತಾರೆ. ಖರೀದಿ ಕೊಟ್ಟವರ ಹೆಸುರ ಉತಾರದಲ್ಲಿ ಮಾಲೀಕರು ಎಂದು ಮುಂದುವರೆದುಕೊಂಡು ಬಂದಿರುತ್ತದೆ ಎಂದರೆ ಸರಿ. ಸದರಿಯವರ ಹೆಸರನ್ನು ಕಡಿಮೆ ಮಾಡಲು ನನ್ನ ತಾತಾ ಬಸವಂತಪ್ಪ ಅವರಾಗಲೀ ಹಾಗೂ ನನ್ನ ತಂದೆ ಪ್ರಯತ್ನ ಮಾಡಿರುವುದಿಲ್ಲ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ನಿಮ್ಮ ತಾತಾ ಹಾಗೂ ನಿಮ್ಮ ತಂದೆ ಖರೀದಿ ಪಡೆದುಕೊಂಡ ನಂತರ ತಮ್ಮ ಹೆಸರನ್ನು ಹಚ್ಚಿಕೊಳ್ಳಲು ಪ್ರಯತ್ನ ಪಟ್ಟಿರುವುದಿಲ್ಲ ಎಂದರೆ ಸರಿ.ಈರಯ್ಯ ಅಪ್ಪಯ್ಯ ರವರ ಸಹ ದಾವಾ ಸ್ವತ್ತಿನಲ್ಲಿ ಜಂಟಿ ಕಬ್ಜಾದಲ್ಲಿರುತ್ತಾರೆ ಎಂದರೆ ಸಾಕ್ಷಿ ನಮ್ಮ ಅಜ್ಜ ಖರೀದಿ ಮಾಡಿದಾಗಿನಿಂದ ದಾವಾ ಸ್ವತ್ತಿನ ಕಬ್ಜಾದಲ್ಲಿ ಇರುತ್ತಾರೆ ಎನ್ನುತ್ತಾರೆ. ಖರೀದಿ ಪಡೆದಾಗಿನಿಂದ ನೀವು ಕಬ್ಜಾದಲ್ಲಿರುವುದಿಲ್ಲ, ನಿಮ್ಮೊಂದಿಗೆ ಅವರು ಇರುತ್ತಾರೆ ಎಂದರೆ ಸರಿಯಲ್ಲ. ಖರೀದಿ ಪಡೆದಾಗಿನಿಂದ ನೀವು ಒಬ್ಬರೇ ಕಬ್ಜಾದಲ್ಲಿ ಇದ್ದೀರಿ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ತಾತಾನು ಆಗಲೀ ನಿಮ್ಮ ತಂದೆಯಾಗಲೀ ಜಂಟಿ ಕಬ್ಜಾವನ್ನು ಎಂದಿಗೂ ಪ್ರಶ್ನೇ ಮಾಡಿರುವುದಿಲ್ಲ ಎಂದರೆ ಸರಿ. ನಿಮ್ಮತಂದೆಯಾಗಲೀ ಅಥವಾ ನಿಮ್ಮ ತಾತಾನಾಗಲೀ ಆರ್ ಟಿ ಸಿ ಯಲ್ಲಿ ಖರೀದಿ ಕೊಟ್ಟವರ ಹೆಸರು ಇರುವುದನ್ನು ಪ್ರಶ್ನೆ ಮಾಡಿರುವುದಿಲ್ಲವಾ ಎಂದರೆ ಸಾಕ್ಷಿ ಸ್ವತ್ತು ನಮ್ಮ ಕಬ್ಜಾದಲ್ಲಿ ಇದುದರಿಂದ ಮಾಡಿರುವುದಿಲ್ಲ ಎನ್ನುತ್ತಾರೆ.

2. 1947 ರಿಂದ 1970 ರ ವರೆಗೂ ಜಂಟಿ ಉತಾರ ಇತ್ತು ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ನನಗೆ ಸದರಿ ಮಾಹಿತಿ ಇದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಸರ್ವೇ ನಂಬರ 76/2 ನ್ನು ಖರೀದಿಸಿದ್ದೇವೆ ಎಂದು ಹರಕತ್ತ ಮಾಡುತ್ತಿದ್ದಾರೆ ಎನ್ನುತ್ತಾರೆ. ಸದರಿ ಅರ್ಧ ಭಾಗಕ್ಕೆ ಪ್ರತಿವಾದಿ ನಂಬರ 6 ಮತ್ತು 7 ರವರು ಮಾಲೀಕರು ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲುಃ ಸಮಯ ಕೋರಿದ ಕಾರಣ ಮುಂದೂಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಪ್ರ.ದಿ.ನ್ಯಾ. ಮತ್ತು ಪ್ರ.ದ.ನ್ಯಾ. ದಂ. ನ್ಯಾ. ಬೈಲಹೊಂಗಲ

ಓ ಎಸ್ ನಂಬರ 179/2019
ಪಿ. ಡಬ್ಲ್ಯೂ -1

**ದಿನಾಂಕಃ 06-03-2025**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ನಂ 9 ರಿಂದ 11 ರವರ ಪರ ವಕೀಲರಾದ ಶ್ರೀ ಎ ಸಿ ಟಿ ವಕೀಲರಿಂದಃ**

ನಾನು ಎಸಎಸಎಲಸಿವರೆಗೆ ವ್ಯಾಸಂಗ ಮಾಡಿರುತ್ತೇನೆ. ಕನ್ನಡ ಇಂಗ್ಲಿಷ ಓದಲು ಬರುತ್ತದೆ. ನಾನು ಈ ದಾವೆಯನ್ನು ವಿಭಾಗ ಕೋರಿರುತ್ತೇನೆ. ಈ ದಾವೆಯನ್ನು ಹೂಡಲು ಹಾಗೂ ಸಾಕ್ಷಿ ಪ್ರತಿಜ್ಞಾಲೇಖಕ್ಕೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ನನ್ನ ತಂದೆಗೆ 10 ಜನ ಮಕ್ಕಳು. ನನ್ನ ಅಕ್ಕ ಗಂಗಮ್ಮಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಯಾಕೇ ಮಾಡಿರುವುದಿಲ್ಲ ಎಂದರೆ ಸಾಕ್ಷಿ ಅವರ ಮಕ್ಕಳು ಪಾಲು ಬೇಡ ಎಂದರು ಎನ್ನುತ್ತಾರೆ. ಸದರಿ ಲೇಖಿಯಲ್ಲಿ ಹೇಳುತ್ತಾರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನನ್ನ ಅಕ್ಕ ಗಂಗಮ್ಮಳನ್ನು ಬೆಳಗಾವಿ ಗಾಂಧಿನಗರದಲ್ಲಿ ಇದ್ದರು, ಎಲ್ಲಿ ಮದುವೆ ಮಾಡಿಕೊಟ್ಟರು ಎಂದು ಹೇಳಲಾಗುವುದಿಲ್ಲ. ಅವರ ಯಜಮಾನರ ಹೆಸರು ಬಸವಣ್ಣೆಪ್ಪ ದೊಡಮನಿ. ಗಂಗವ್ವ ತೀರಿಕೊಂಡು ಬಹಳ ವರ್ಷಗಳಾಗಿರುತ್ತದೆ. ಬಸವಣ್ಣೆಪ್ಪ ಸಹ ತೀರಿಕೊಂಡಿರುತ್ತಾರೆ. ದಾವಾ ಸ್ವತ್ತುಗಳು ಪಿತ್ರಾರ್ಜಿತ ಸ್ವತ್ತು ಎಂದರೆ ಸರಿ. ಹಿರಿಯ ಶ್ರೇಣಿ ನ್ಯಾಯಾಲಯ , ಬೈಲಹೊಂಗಲ ದಲ್ಲಿ ನಮ್ಮ ದೊಡ್ಡಪ್ಪನ ಮಕ್ಕಳು ಓ ಎಸ ನಂ 85/2015 ನ್ನು ವಿಭಾಗ ಕೋರಿ ಹೂಡಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ಗಂಗವ್ವ ಪಕ್ಷಗಾರರಾಗಿದ್ದರಾ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಸದರಿ ದಾವೆಯಲ್ಲಿ ನಾನು ತಕರಾರು ಹಾಕಿರುತ್ತೇನೆ. ಗಂಗವ್ವಳು ನನ್ನ ತಂದೆಯ ಮಗಳು ಎಂದು ನಿಮ್ಮ ವಕೀಲರಿಗೆ ಮಾಹಿತಿ ನೀಡಿರುತ್ತಿರಾ ಎಂದರೆ ಸಾಕ್ಷಿಯು ನನ್ನ ಪಾಲು ಮಾತ್ರ ಕೇಳಿದ್ದೇನೆ ಎನ್ನುತ್ತಾರೆ. ಉದ್ದೇಶಪೂರ್ವಕವಾಗಿ ನಾನು ಹಾಗೂ ಓ ಎಸ ನಂ 85/2015ರ ವಾದಿಯರು ಗಂಗವ್ವಳನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಾವೆಯನ್ನು 135 ಹಾಗೂ 136 ಸರ್ವೇ ನಂಬರಿಗೆ ಸಂಬಂಧಿಸಿದಂತೆ ದಾವೆ ಹೂಡಿದ್ದರು. ಸದರಿ ದಾವೆ ದಿಃ 04-04-2019 ರಲ್ಲಿ ಡಿಕ್ರಿ ಆಗಿರುತ್ತದೆ ಎಂದರೆ ಸರಿ. ಸದರಿ ತೀರ್ಪು ಗಂಗವ್ವ ಪಕ್ಷಗಾರರ ಅಲ್ಲದ ಕಾರಣ ಆಕೆಗೆ ಬಂಧನಕಾರಿ ಆಗಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನನ್ನ ದೊಡ್ಡಪ್ಪನ ಪರವಾಗಿ ಹಾಜರಾದ ವಕೀಲರನ್ನೇ ಈ ದಾವೆಯಲ್ಲಿ ನನ್ನ ಪರವಾಗಿ ಹಾಜರಾಗಿರುತ್ತಾರೆ ಎಂದರೆ ಸರಿಯಲ್ಲ. ಪ್ರಾಥಮಿಕ ಡಿಕ್ರಿ ಆದ ನಂತರ ಎಫಡಿಪಿ 19/2019 ನ್ನು ನನ್ನ ದೊಡ್ಡಪ್ಪನ ಮಕ್ಕಳು ದಾಖಲಿಸಿರುತ್ತಾರೆ ಎಂದರೆ ಸರಿ. ಈ ಪ್ರಕರಣ ಚಾಲ್ತಿ ಇರುವ ಸಮಯದಲ್ಲಿ ಎಫಡಿಪಿಯಲ್ಲಿ ಫೈನಲ ಡಿಕ್ರಿ ಆಗಿರುತ್ತದೆ ಎಂದರೆ ಸರಿ. ಎಫಡಿಪಿಯಲ್ಲೂ ಸಹ ಗಂಗವ್ವಳ ವಾರಸುದಾರರು ಪಕ್ಷಕಾರರನ್ನಾಗಿ ಮಾಡದ ಕಾರಣ ಅವರಿಗೆ ಬಂಧನಕಾರಿ ಅಲ್ಲ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ನಾನು ಉದ್ದೇಶಪೂರ್ವಕವಾಗಿ ಗಂಗವ್ವನ ಬಗ್ಗೆಯಾಗಲಿ , ಗಂಗವ್ವನ ವಾರಸುದಾರರ ಬಗ್ಗೆಯಾಗಲಿ ಮಾಹಿತಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾವು ಗಂಗವ್ವನ ವಾರಸುದಾರರನ್ನು ಬಿಟ್ಟು ನಿಪಿ - 9 ರಂತೆ ನಮ್ಮ ಹೆಸರನ್ನು ಮಾತ್ರ ಹಚ್ಚಿಕೊಂಡಿರುತ್ತೇವೆ ಎಂದರೆ ಸಾಕ್ಷಿಯು ಅವರು ಬರಲಿಲ್ಲ ಎನ್ನುತ್ತಾರೆ. ದಾವಾ ಸ್ವತ್ತಿನಲ್ಲಿ 1/10ನೇ ಹಿಸ್ಸೆ ಗಂಗವ್ವಳ ವಾರಸುದಾರರಿಗೆ ಇರುತ್ತದೆ ಎಂದರೆ ಸರಿ. ಅದೇ ರೀತಿ ಓ ಎಸ ನಂ 85/2015ರ ಸಲ್ಲಿಸಿದ ಸ್ವತ್ತುಗಳಾದ ಆರ ಎಸ ನಂ 136/1 ಹಾಗೂ 136/5 ರಲ್ಲಿಯೂ ಸಹ ಗಂಗವ್ವ ವಾರಸುದಾರರಿಗೆ ಹಿಸ್ಸೆ ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ದಾವೆಯ 136/1 04 ಎಕರೆ 23 ಗುಂಟೆ ಎಂದರೆ ಸರಿ. ಅದೇ ರೀತಿ 136/5, 03 ಎಕರೆ 28 ಗುಂಟೇ 08 ಆಣೆ ಎಂದರೆ ಸರಿ. 136/1 ಈಗ 05 ಹಿಸ್ಸೆಗಳಾಗಿರುತ್ತವೆ ಎಂದರೆ ಸರಿ. ಸದರಿ 05 ಹಿಸ್ಸಾಗಳನ್ನು ಈ ದಾವೆಯಲ್ಲಿ ಹಾಜರುಪಡಿಸಿರುತ್ತೇವೆ. ಆರ.ಎ. 533/2019 ಅಪೀಲನ್ನು ದೊಡ್ಡಪ್ಪನ ಮಕ್ಕಳು ಮಾಡಿದ್ದರು ಎಂದರೆ ಸಾಕ್ಷಿ ಅಪೀಲು ಮಾಡಿದವರು 1 ನೇ ಪ್ರತಿವಾದಿ. ಅದರಲ್ಲಿ ಗಂಗವ್ವಳನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ನಾವು

ಉದ್ದೇಶಪೂರ್ವಕವಾಗಿ ಗಂಗವ್ವಳನ್ನು ಹಾಗೂ ಅವರ ಮಕ್ಕಳನ್ನು ಪಕ್ಷಗಾರರನನ್ನಾಗಿ ಮಾಡಿರುವುದಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ.

( ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಪ್ರ.ದಿ.ನ್ಯಾ. ಮತ್ತು ಪ್ರ.ದ.ನ್ಯಾ. ದಂ. ನ್ಯಾ. ಬೈಲಹೊಂಗಲ